ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: Comp: 09 :03-04

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಾವೇರಿ ಭವನ, ಜಲಮಂಡಳಿ ಕಟ್ಟಡ,
7ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ: 07-10-2003.

ಗಣಕೀಕರಣ

ಸುತ್ತೋಲೆ-5

ವಿಷಯ:- ಕಾವೇರಿ ಸಾಫ್ಟ್‌ವೇರ್‌ದಲ್ಲಿ ದಸ್ತಾವೇಜುಗಳನ್ನು
ನೋಂದಾಯಿಸುವ ಕುರಿತು.

- - - - - -

ದಸ್ತಾವೇಜುಗಳ ನೋಂದಣಿಯನ್ನು ಕಾವೇರಿ ಸಾಫ್ಟ್‌ವೇರ್‌ನಲ್ಲಿ ನೋಂದಾಯಿಸುವ ಕಛೇರಿಗಳಲ್ಲಿ ಈ ಕೆಳಗೆ ವಿವರಿಸಿದ ಪ್ರಾರಂಭಿಕ ತೊಂದರೆಗಳು ಇವೆ ಎಂದು ಕೆಲ ಜಿಲ್ಲಾ ನೋಂದಣಾಧಿಕಾರಿಯವರು ಮತ್ತು ಉಪ ನೋಂದಣಾಧಿಕಾರಿಯವರು ವರದಿ ಮಾಡಿರುತ್ತಾರೆ.

1. ಆಸ್ತಿ ಮಾಹಿತಿ ಸ್ಕ್ರೀನ್ (Property Information Screen) ದಲ್ಲಿ ಕಂಡು ಬರುವ "ಗ್ರಾಮ / ಪ್ರದೇಶ" ಎಂಬ "Text Box" ದಲ್ಲಿ ಆಯಾ ಉಪ ನೋಂದಣಾಧಿಕಾರಿಯವರ ಕಛೇರಿ ವ್ಯಾಪ್ತಿಯಲ್ಲಿಯ ಎಲ್ಲಾ ಗ್ರಾಮ / ಪಟ್ಟಣ / ಪ್ರದೇಶಗಳ ವಿವರಗಳು ಇವೆಯೋ ಹೇಗೆ ಎಂಬುದನ್ನು ಕೂಲಂಕುಷವಾಗಿ ಪರಿಶೀಲಿಸಬೇಕು, ಒಂದು ವೇಳೆ ಬಿಟ್ಟು ಹೋಗಿದ್ದರೆ ಅವುಗಳ ಪಟ್ಟಿ ಮಾಡಿ ಈ ಕಛೇರಿಗೆ ಮುಂದಿನ ಕ್ರಮಕ್ಕೆ ತಿಳಿಸುವುದು.

2. ಕೆಲವೊಂದು ಉಪ ನೋಂದಣಿ ಕಛೇರಿಗಳಲ್ಲಿ ಅವರ ವ್ಯಾಪ್ತಿಗೆ ಒಳಪಡುವ ಆಸ್ತಿಗಳ ಮಾರುಕಟ್ಟೆ ಮೌಲ್ಯವು ಕಾವೇರಿ ಅಪ್ಲಿಕೇಶನ್ ಸಾಫ್ಟ್‌ವೇರ್‌ನಲ್ಲಿ ಕಂಡು ಬರುತ್ತಿಲ್ಲವೆಂದು ವರದಿ ಮಾಡಿರುತ್ತಾರೆ. ಕಾವೇರಿ ಸಾಫ್ಟ್‌ವೇರ್‌ನಲ್ಲಿ ಕಂಡು ಬರದೇ ಇರುವ ಅಂಥಹ ಗ್ರಾಮ, ಟೌನ್, ಏರಿಯಾ ಇತ್ಯಾದಿ ಆಸ್ತಿಗಳ ಮೌಲ್ಯವು ಸ್ಥಿರಾಸ್ತಿ ಅಂದಾಜು ಮಾರುಕಟ್ಟೆ ಮೌಲ್ಯ ನಿರ್ಧರಿಸುವ ಕಮಿಟಿಯವರ ತೀರ್ಮಾನದಂತೆ ಅನುಸರಿಸುತ್ತಿರುವ ಮಾರುಕಟ್ಟೆ ಮೌಲ್ಯದ ಸವಿಸ್ತಾರವಾದ ವಿವರವನ್ನು ಬರೆದು ಉಪ ನೋಂದಣಾಧಿಕಾರಿಯವರು ಧೃಡೀಕರಿಸಿ ಅದನ್ನು ತಕ್ಷಣವೇ ಸಹಾಯಕ ನೋಂದಣಿ ಮಹಾ ಪರಿವೀಕ್ಷಕರು (ಆಡಿಟ್), 7ನೇ ಮಹಡಿ, ಜಲ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು ಇವರ ವಿಳಾಸಕ್ಕೆ ಕಳುಹಿಸಿ ಕೊಡಲು ನಿರ್ದೇಶಿಸಿದೆ.

ರಾಜ್ಯಾದ್ಯಂತ ಬಿಟ್ಟುಹೋದ ಇಂತಹ ಮಾಹಿತಿಯನ್ನು ಕ್ರೋಢೀಕರಿಸಿ ತಕ್ಷಣವೇ ಕಾವೇರಿ ಸಾಫ್ಟ್‌ವೇರ್‌ದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ಬಿಟ್ಟುಹೋದ ಈ ಮಾಹಿತಿಯನ್ನು ಆದ್ಯತೆ ಮೇಲೆ ಈ ಕಛೇರಿಗೆ ವರದಿ ಮಾಡತಕ್ಕದ್ದು. ಈ ಕಾರ್ಯ ಪೂರ್ತಿ ಆಗುವವರೆಗೆ ದಸ್ತಾವೇಜುಗಳ ನೋಂದಣಿಯನ್ನು ನಿಲ್ಲಿಸಕೂಡದು. ಆಸ್ತಿಗಳ ಮೌಲ್ಯವನ್ನು ಈಗ ಅನುಸರಿಸುತ್ತಿರುವ ಮ್ಯಾನುಯಲ್ ಪದ್ಧತಿಯಂತೆ ಲೆಕ್ಕ ಹಾಕಿ ಕಾವೇರಿ ಸಾಫ್ಟ್‌ವೇರ್‌ನಲ್ಲಿ ಈ ಕೆಳಗೆ ವಿವರಿಸಿದ ಕ್ರಮ (Step) ಗಳನ್ನು ಅನುಸರಿಸಬೇಕು.

1. After opening the PIS step 1 CLICK "Property button". Enter the data in Property Information screen, enter the boundaries, schedules, Index-II village, consideration, Property number details and consideration. AND DIRECTLY ENTER manually calculated MARKET VALUE of the property in Market value field (Yellow box).

2. Close the Property Information screen, enter number of pages for the document and move to step 2.

3. Calculate Stamp duty as usual,

4. Next procedure is same as for the normal document.

ಬಿಟ್ಟು ಹೋದ ಮಾಹಿತಿಯನ್ನು ಸರಿಪಡಿಸುವವರೆಗೆ ಮೇಲೆ ವಿವರಿಸಿದ ಪದ್ಧತಿಯನ್ನು ಅನುಸರಿಸಿ ನೋಂದಾಯಿಸತಕ್ಕದ್ದು.

(ಡಿ. ಸತ್ಯಮೂರ್ತಿ, I.A.S.)
ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

to
AIGR(Aud)

ಇವರಿಗೆಃ-

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಯವರಿಗೆ.
2. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಯವರಿಗೆ
3. ಗಾರ್ಡ ಫೈಲ್.
5. ಕಛೇರಿ ಕಡತಕ್ಕೆ.

ಪ್ರತಿಯನ್ನುಃ-

1. CMS Ltd., IInd Floor, Laxmi Complex, No. 54, St. Marks Road, Bangalore-10.
2. ECIL Computer Ltd., No. 30/1, Cunningham Road, Bangalore-52.